# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 278
ಸದಸ್ಯರ ಹೆಸರು : ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 04-03-2020
ಉತ್ತರಿಸುವ ಸಚಿವರು : ಮಾನ್ಯ ಕಂದಾಯ ಸಚಿವರು

| | ಪ್ರಶ್ನೆ | ಉತ್ತರ |
|---|---|---|
| (ಅ) | 2019 ರಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತ ಹಾಗೂ ಪ್ರವಾಹದಿಂದಾಗಿ ಮನೆ ಹಾಗೂ ನಿವೇಶನಗಳನ್ನು ಕಳೆದುಕೊಂಡು ನಿರಾಶ್ರಿತರಾದವರಿಗೆ ಪುನರ್ವಸತಿ ಹಾಗೂ ಪರಿಹಾರ ದೊರೆಯದೆ ಸಂಕಷ್ಟಕ್ಕೀಡಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2019 ರಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಿದ ಭೂಕುಸಿತ ಹಾಗೂ ಪ್ರವಾಹದಿಂದಾಗಿ ಸಂಪೂರ್ಣವಾಗಿ ಹಾನಿಯಾದ 'ಎ' ವರ್ಗದ (ಶೇ 75 ರಿಂದ 100) ಮನೆಗಳು -372, ಭಾಗಶಃ ಹಾನಿಯಾದ 'ಬಿ' ವರ್ಗದ (ಶೇ 25 ರಿಂದ 75) ಮನೆಗಳು-398 ಹಾಗೂ ಅಲ್ಪ-ಸ್ವಲ್ಪ ಹಾನಿಯಾದ 'ಸಿ' ವರ್ಗದ (ಶೇ 15 ರಿಂದ 25) ಮನೆಗಳು-1563 ಸೇರಿದಂತೆ ಒಟ್ಟು 2360 ಮನೆಗಳು ಹಾನಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| (ಆ) | ಬಂದಿದ್ದಲ್ಲಿ, ಸರ್ಕಾರ ಈ ಕುರಿತು ಕೈಗೊಂಡಿರುವ ಪರಿಹಾರದ ಕ್ರಮಗಳೇನು; | 'ಎ' ವರ್ಗದ ಮನೆಗಳಿಗೆ ತಲಾ ರೂ.5.00 ಲಕ್ಷ,<br>'ಬಿ' ವರ್ಗದ ಮನೆಗಳಿಗೆ ತಲಾ ರೂ.3.00 ಲಕ್ಷ,<br>'ಸಿ' ವರ್ಗದ ಮನೆಗಳಿಗೆ ತಲಾ ರೂ.50,000/-<br>'ಎ' ವರ್ಗದ ಸಂತ್ರಸ್ಥರು ಮನೆ ನಿರ್ಮಾಣವಾಗುವ ವರೆಗೆ ಮಾಸಿಕ ತಲಾ ರೂ.5000/- ರಂತೆ 10 ತಿಂಗಳಿಗೆ ಬಾಡಿಗೆ ಮೊತ್ತ ಹಾಗೂ ತಾತ್ಕಾಲಿಕ ಶೆಡ್ ನಿರ್ಮಾಣ ಮಾಡುವ ಸಂತ್ರಸ್ಥರಿಗೆ ರೂ.50,000/- ರಂತೆ ಅನುದಾನ ಬಿಡುಗಡೆ ಮಾಡಲಾಗಿದೆ.<br>ಪ್ರಕೃತಿ ವಿಕೋಪದಲ್ಲಿ ವಾಸದ ಮನೆ ಹಾನಿಯಾದ ಸಂತ್ರಸ್ಥರಿಗೆ ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತದ ವತಿಯಿಂದ ತಯಾರಿಸಲಾದ ಜಿಪಿಎಸ್ ಆಧಾರಿತ ಜಿಯೋಟ್ಯಾಗಿಂಗ್ ತಂತ್ರಾಂಶದ ಮೂಲಕ ಸಂತ್ರಸ್ಥರ ವಿವರ ದಾಖಲಿಸಿ ಪರಿಹಾರ ಮೊತ್ತವನ್ನು ಹಂತ-ಹಂತವಾಗಿ ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದೆ. |
| (ಇ) | ಜಿಲ್ಲೆಯಲ್ಲಿ 2019ರ ಪ್ರಕೃತಿ ವಿಕೋಪದಲ್ಲಿ ನಿರಾಶ್ರಿತರಾದವರ ವಿವರ ಹಾಗೂ ಪರಿಹಾರ ದೊರಕಿದ್ದಲ್ಲಿ ಆ ಫಲಾನುಭವಿಗಳ ವಿವರ ನೀಡುವುದು ಇದುವರೆಗೂ ಹಲವರಿಗೆ ಪರಿಹಾರ ದೊರೆಯದಿರಲು ಕಾರಣಗಳೇನು? | ಜಿಲ್ಲೆಯಲ್ಲಿ 2019ರ ಪ್ರವಾಹದಿಂದ ಮನೆಹಾನಿಯಾದ ಸಂತ್ರಸ್ಥರ ವಿವರಗಳು https://ashraya.karnataka.gov.in/Report/frmflood Category1.aspx ವೆಬ್‌ಸೈಟ್‌ನಲ್ಲಿ ಲಭ್ಯವಾಗುವುದು. |

ಕಂಇ 101 ಟಿಎನ್‌ಆರ್ 2020

(ಆರ್. ಅಶೋಕ)
ಕಂದಾಯ ಸಚಿವರು